

## ಹೃತಿಕ್ ಥ್ರಿಲ್

ಹೃತಿಕ್ ರೋಷನ್ ತನ್ನ ಹೊಸ ಚಿತ್ರದ ಬಗ್ಗೆ ತುಂಬಾ ಥ್ರಿಲ್ ಆಗಿದ್ದಾನಂತೆ. ಬಿಹಾರದ ವಿಶ್ವಖ್ಯಾತಿಯ ಅಂಕ ಗಣಿತಜ್ಞ ಆನಂದ ಕುಮಾರ್ ಅವರ ಜೀವನ ಚರಿತ್ರೆ ಆಧರಿತ ಚಿತ್ರವಿದು. ಆನಂದ ಕುಮಾರ್ ಸರಳವಾಗಿ ಗಣಿತದ ಸಮಸ್ಯೆಗಳನ್ನು ಬಿಡಿಸುವಲ್ಲಿ ಎತ್ತಿದ ಕೈ. ಅದನ್ನು ಅಷ್ಟೇ ಸರಳವಾಗಿ ವಿದ್ಯಾರ್ಥಿಗಳಿಗೆ ತಿಳಿ ಹೇಳುವುದರಲ್ಲೂ ಎಕ್ಸ್‌ಪರ್ಟ್. ಪ್ರತಿ ವರ್ಷ ದೇಶದ 30 ಮಂದಿ ಬಡ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಿ ಐಐಟಿ ಪರೀಕ್ಷೆಗೆ ತಯಾರಿಗೊಳಿಸಿ, ಅತ್ಯಧಿಕ ಯಶಸ್ಸು ಹೊಂದಿರುವ ಕೀರ್ತಿಯೂ ಆನಂದ್ ಅವರದ್ದು. ಇದೇ ಹೃತಿಕ್ ಚಿತ್ರದ ಹೈಲೈಟ್ ಅಂತೆ. ವಿಭಿನ್ನ ಲುಕ್‌ನಲ್ಲಿ ಕಾಣಿಸಿಕೊಂಡಿರುವ ಹೃತಿಕ್, ಈ ಚಿತ್ರದ ಮೂಲಕ ತನ್ನ ಡ್ಯಾನ್ಸ್ ಅಭಿಮಾನಿಗಳನ್ನು ಹೇಗೆ ಮೆಚ್ಚಿಸಿದ್ದಾನೋ ಎನ್ನುವುದು ಬಾಲಿವುಡ್‌ನ ಕುತೂಹಲ.



## ಮನೋಜ್ ಬ್ಯುಸಿ

ಮನೋಜ್ ಬಾಜಪೈ ಬಾಲಿವುಡ್‌ನಲ್ಲಿ ಇವತ್ತಿಗೂ ನಿರ್ದೇಶಕರ ನಟ. ಸತತವಾಗಿ ಸಿನಿಮಾಗಳಲ್ಲಿ ನಟಿಸುತ್ತಿರುವ ಪೋಷಕ ನಟರ ಪೈಕಿ ಮನೋಜ್ ಅಗ್ರಸ್ಥಾನದಲ್ಲಿದ್ದಾನೆ. ಜಂಟಿ ಹೀರೋಗಳಿರುವ ಚಿತ್ರಗಳಲ್ಲೂ ಮನೋಜ್ ಬೇಕೇ ಬೇಕು. 'ಐಯಾರಿ' ಚಿತ್ರದಲ್ಲಿ ಸಿದ್ಧಾರ್ಥ ಮಲ್ಹೋತ್ರಾ ಜತೆಗೆ ಮಿಲಿಟರಿ ಅಧಿಕಾರಿಯ ಪಾತ್ರದಲ್ಲಿ ಮನೋಜ್ ಸಖತ್ ಮಿಂಚಿದ್ದಾನೆ.

'ಬ್ಯಾಂಡಿಟ್ ಕ್ವೀನ್'ನಲ್ಲಿ ಸಣ್ಣ ಪಾತ್ರವೊಂದರ ಮೂಲಕ ಬಾಲಿವುಡ್ ಪ್ರವೇಶಿಸಿದ ಮನೋಜ್, 'ಸತ್ಯಾ' ಚಿತ್ರದಲ್ಲಿ ನಿರ್ವಹಿಸಿದ ಗ್ಯಾಂಗ್‌ಸ್ಟರ್ ಪಾತ್ರ ಅತ್ಯುತ್ತಮ ಪೋಷಕ ನಟನ ರಾಷ್ಟ್ರಪ್ರಶಸ್ತಿ ಗಳಿಸಿಕೊಟ್ಟಿತು. ಪುರುಸೊತ್ತೇ ಇಲ್ಲದಂತೆ ದುಡಿಯುವುದರಲ್ಲಿ ಮನೋಜ್ ಎತ್ತಿದ ಕೈ. ಅದಕ್ಕೆ ತಕ್ಕಂತೆ ಆತನಿಗೆ ವಿಭಿನ್ನ ಪಾತ್ರಗಳೂ ಸಿಗುತ್ತಿವೆ. ಜೂಟಾ ಕಹೀಂ ಕಾ (ಕಾರ್ತಿಕ್ ಆರ್ಯನ್ ಜತೆಗೆ), ರಾಖ್ (ಜಾನ್ ಅಬ್ರಹಾಂ ಜತೆಗೆ), ಮಿಸ್ಸಿಂಗ್ (ಟಬೂ ಜತೆಗೆ) ಬಾಗಿ–2 (ಟೈಗರ್ ಶ್ರಾಫ್ ಜತೆಗೆ) ಚಿತ್ರಗಳಲ್ಲಿ ಮನೋಜ್ ನದ್ದು ಗಮನ ಸೆಳೆಯುವ ಪಾತ್ರಗಳು. ಮುಂಬೈ ಸಾಗಾ ಮತ್ತು ಲವ್ ಸೋನಿಯಾ ದಲ್ಲೂ ವಿಭಿನ್ನ ಅಭಿನಯಕ್ಕೆ ಅವಕಾಶ ಸಿಕ್ಕಿದೆ. ಸೃಜನಶೀಲ ನಿರ್ದೇಶಕರಿಗೆ ಇವತ್ತಿಗೂ ಮನೋಜ್ ಅನಿವಾರ್ಯ ಆಯ್ಕೆ.

## ಕರೀನಾ ಫಿಟ್

ಹೆರಿಗೆಯಾದ ಬಳಿಕ ಒಂದು ವರ್ಷದಿಂದ ಬೆಳ್ಳಿತೆರೆಯಿಂದ ಕಣ್ಮರೆಯಾಗಿದ್ದರೂ ಸದಾ ಸುದ್ದಿ ಮಾಡುತ್ತಿರುವಾಕೆ ಈ ಕರೀನಾ ಕಪೂರ್. ತನ್ನ ಅಭಿನಯ ಚಾತುರ್ಯದ ಜತೆಗೆ ಫಿಟ್ ಪರ್ಸನಾಲಿಟಿಯಿಂದಲೂ ಕರೀನಾ ನಂಬರ್ ಒನ್ ಪಟ್ಟದ ರೇಸ್‌ನಲ್ಲಿದ್ದವಳು. ಈಗ ಮಗುವಾದ ಬಳಿಕ ಮತ್ತೆ ಬೆಳ್ಳಿತೆರೆಯಲ್ಲಿ ಮಿಂಚಲು ಕರೀನಾ ರೆಡಿಯಾಗಿದ್ದಾಳಂತೆ. ಸತತವಾಗಿ ಜಿಮ್ ನಲ್ಲಿ ಕಸರತ್ತು ನಡೆಸುತ್ತಿರುವ ಕರೀನಾ ಜತೆಜತೆಗೇ ತನ್ನ ಹಳೆಯ ಫಿಗರ್‌ಅನ್ನು ಮರಳಿ ಗಳಿಸಲು ಯೋಗದ ಮೊರೆ ಹೋಗಿದ್ದಾಳಂತೆ. 'ವೀರೇ ಕಿ ವೆಡಿಂಗ್' ಚಿತ್ರದಲ್ಲಿ ತನಗಿಂತ ಕಡಿಮೆ ವಯಸ್ಸಿನ ಹೀರೋಯಿನ್‌ಗಳ ಜತೆಗೆ ಸೆಣಸಾಡಲು ಈಗ ಆಕೆ ಫಿಟ್ ಆಗಿದ್ದಾಳಂತೆ.

■ ಬಿಂದು

